	Sriyuths.—	Sheds.
3	M/s Neetan Engineering Works, Belgaum	1
4	M/s B. K. Industries Belgaum	1
5	Y. R. Marathe	1
6	K. R. Kirlɔskar, Belgaum	1
7	K. V. Wadhwani, Bombay	1
8	M/s Bombay Machine Tools, Bombay	1
9	B. S. Gore, Belgaum ...	1
10	S. R. Shetti ...	1
11	B. R. Bhati ...	1
12	M. R. Pandit ...	1
	Total ...	12

ಶ್ರೀ ಕೆ. ಪಿ. ಬೈರೇಗೌಡ.—ನನ್ನ "ಎ" ಪ್ರಶ್ನೆಗೆ ಉತ್ತರವಾಗಿ ಎಂಟು ಕೈಗಾರಿಕೆ ಎಸ್ಟೇಟುಗಳು ಎಂಬುದಾಗಿ ಹೇಳಿದ್ದೀರಿ. ಈಗ ಕೊಟ್ಟಿರತಕ್ಕ ಕೈಗಾರಿಕೆ ಎಸ್ಟೇಟುಗಳನ್ನೆಲ್ಲಾ ಉಪಯೋಗಿಸುತ್ತಿದ್ದಾರೆಯೇ ಅಥವಾ ಅವನ್ನು ಬೇರೆಯವರಿಗೆ ವರ್ಗಾವಣೆ ಮಾಡಿದ್ದಾರೆಯೇ ? ಹಾಗಿದ್ದರೆ ಆ ರೀತಿ ಮಾಡುವುದಕ್ಕೆ ಏಕೆ ಅವಕಾಶ ಕೊಟ್ಟಿದ್ದೀರಿ ?

†ಶ್ರೀ ಕೆ. ಮಲ್ಲಪ್ಪ.—ಬೇರೆಯವರಿಗೆ ವರ್ಗಾಯಿಸಿರತಕ್ಕದ್ದು ನನ್ನ ತಿಳುವಳಿಕೆಗೆ ಬಂದಿಲ್ಲ. ಕೆಲವರು ಈಗಾಗಲೇ ಉಪಯೋಗಿಸುತ್ತಿದ್ದಾರೆ. ಇನ್ನು ಕೆಲವರು ಉಪಯೋಗ ಮಾಡುವವರಾಗಿದ್ದಾರೆ.

ಶ್ರೀ ಕೆ. ಪಿ. ಬೈರೇಗೌಡ.—ಕೈಗಾರಿಕಾ ಎಸ್ಟೇಟಿಗೆ ಏನೇನು ಅನುಕೂಲಗಳನ್ನು ಕೊಡಬೇಕೋ ಅವೆಲ್ಲವನ್ನೂ ಪೂರ್ಣವಾಗಿ ಕೊಡುತ್ತಾರೋ ?

ಶ್ರೀ ಕೆ. ಮಲ್ಲಪ್ಪ.—ವಿದ್ಯುಚ್ಛಕ್ತಿ ಮಾತ್ರ ಕೊಡಬೇಕಾಗಿದೆ. ಆದರೆ ಕೆಲವು ಕಡೆ ಎಷ್ಟು ಕೊಡಬೇಕೆಂಬುದನ್ನು ಇನ್ನೂ ನಿರ್ಧಾರ ಮಾಡಿಲ್ಲ.

Sri G. V. GOWDA.—May I know the reason for not alloting sites in Mangalore and Gulbarga ?

ಶ್ರೀ ಕೆ. ಮಲ್ಲಪ್ಪ.—ಈ ಎರಡು ಕಡೆಗಳಲ್ಲಿಯೂ, ಅಂದರೆ ಮಂಗಳೂರು ಮತ್ತು ಗುಲ್ಬರ್ಗಾದಲ್ಲಿ ಕೆಲಸ ನಡೆಯುತ್ತಾ ಇದೆ. ವಿದ್ಯುಚ್ಛಕ್ತಿ ಅವಕ್ಕೂ ಸಾಕಷ್ಟು ಮುಂದೆ ದೊರೆಯುತ್ತದೆ. ಆದರೆ ಪೂರ್ತಿ ಕೆಲಸ ವಾಗಿಲ್ಲ.

Sri G. V. GOWDA.—You have been pleased to say that they have constructed and not yet allotted, why ?

Sri K. MALLAPPA.—Construction is not complete. Power is not available.

Sri G. V. GOWDA.—May I know when the new Industrial Estates were sanctioned ?

Sri K. MALLAPPA.—The places have been determined in 1961.

Sri B. R. SUNTHANKAR.—May I know whether it is not a fact that 12 sheds constructed in Belgaum are vacant because there is no supply of power and water ?

Sri K. MALLAPPA.—I am aware of that fact.

ಶ್ರೀ ಗಂಗಾಧರ ನವಲೋಷಿ.—ಗುಲ್ಬರ್ಗಾದಲ್ಲಿ ಷೆಡ್ಡುಗಳನ್ನು ಹಂಚಿಕೆ ಮಾಡಿಲ್ಲ, ಬಿಲ್ಡಿಂಗ್ ತಯಾರು ಇಲ್ಲವೆಂದು ಹೇಳುತ್ತೀರಿ. ಈಗ ಬಿಲ್ಡಿಂಗ್ ಆಗಿ ಒಂದೂವರೆ ವರ್ಷ ಆದರೂ ಅದು ಏನೂ ಉಪಯೋಗ ವಿಲ್ಲದೆ ದುರುಪಯೋಗವಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ದುರುಪಯೋಗವೇನೂ ಆಗುತ್ತಿಲ್ಲ. ಆದರೆ ಎಲ್ಲಾರೀ ಯಲ್ಲೂ ಸಂಪೂರ್ಣವಾಗಿ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನೂ ಕೆಲಸ ಉಳಿದಿದೆ. ಪವರ್ ಸಾಕಷ್ಟು ಇಲ್ಲವೆಂದು ತಿಳಿಸಿದ್ದೇನೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಹಾಸನದಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಮಾಡುತ್ತೇವೆ ಎಂಬುದಾಗಿ ಅಪ್ಪಣೆ ಕೊಡಿಸಿದ್ದೀರಿ. ಅದರ ಪ್ರಾರಂಭೋತ್ಸವವನ್ನು ಯಾವಾಗ ಮಾಡುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಈ ವರ್ಷದಲ್ಲಿ ಮಾಡುತ್ತೇವೆ.

ಶ್ರೀ ಕೆ. ಪಿ. ಬೈರೇಗೌಡ.—ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟಿನವರು ಇಂಡಸ್ಟ್ರಿಯಲ್ ಎಸ್ಟೇಟ್ ಕೋಟಾ ಕೊಟ್ಟ ನಂತರ ಎಲೆಕ್ಟ್ರಿಸಿಟಿ ಬೋರ್ಡಿಗೆ ಹೋದಾಗ್ಗೆ, ಅಷ್ಟು ಪವರ್ ಕೊಡಲು ಸಾಧ್ಯವಿಲ್ಲ ವೆಂದು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಹೌದು.

ಶ್ರೀ ಕೆ. ಪಿ. ಬೈರೇಗೌಡ.—ಅಂಥಾದ್ದನ್ನು ಸರಿಪಡಿಸುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಪವರ್ ಪಾರ್ಜೆಲ್ ಇರುವುದನ್ನು ಪರಿಹರಿಸುವುದಕ್ಕೆ ತಕ್ಕ ಪ್ರಯತ್ನಗಳು ನಡೆಯುತ್ತಿವೆ. ಆದಷ್ಟು ಜಾಗ್ರತೆ ಈ ವಿದ್ಯುಚ್ಛಕ್ತಿ ಕೊರತೆಯನ್ನು ಹೋಗಲಾಡಿಸಬೇಕೆಂದು ಸರ್ಕಾರ ದವರು ಸೂಕ್ತ ವ್ಯವಸ್ಥೆಯನ್ನು ಕೈಗೊಳ್ಳುತ್ತಿದ್ದಾರೆ.

Sri G. V. GOWDA.—Out of the 30 places mentioned, may I know the number of sheds to be put up ?

Sri K. MALLAPPA.—I have not got the details. In about 10 places in which we propose to take up this year, sites have been acquired.

Primary Schools upgraded upto VII Standard in Chamarajanagar Taluk.

*Q.—437. **Sri M. C. BASAPPA** (Chamarajanagar).—

Will the Government be pleased to state :—

(*a*) the number of Primary Schools that have been upgraded upto VII Standard in Chamarajanagar Taluk ;

(*b*) the number of Primary Schools that are yet to be upgraded ;

(*c*) number of additional teachers required to meet the demand for the upgraded schools ;

(SRI M. C. BASAPPA)

(*d*) whether they have received any proposal for sanctioning of additional teachers;

(*e*) if so, when they will be sanctioned?

A.—Sri S. R. KANTHI (Minister for Education).—

(*a*) One.

(*b*) Eight.

(*c*) Eight.

(*d*) Yes.

(*e*) The matter is being examined.

Sri M. C. BASAPPA.—May I know the total number of primary schools in Chamarajanagar?

† Sri S. R. KANTHI.—I want notice. This is only about the number of primary schools yet to be upgraded.

Sri M. C. BASAPPA.—May I know the number of schools upgraded to V and VI standards?

Sri S. R. KANTHI.—There are 14 schools which are teaching VII standard but they have not been upgraded. One has been upgraded upto VIII. Four are upgraded upto V standard and one upto VI and VII standard.

Sri M. C. BASAPPA.—May I know the total number of teachers required?

Sri S. R. KANTHI.—Eight.

Sri M. C. BASAPPA.—Has it come to the notice of the Government that one Range has asked for 40 teachers?

ಶ್ರೀ ಎಸ್. ಆರ್. ಕಂಠಿ.—ಒಂದು ರೇಂಜ್‌ಗೆ ಎಷ್ಟು ಬೇಕೋ ಅಷ್ಟೂ ಕೊಡಬೇಕೆಂಬ ಬಗ್ಗೆ ವಿಚಾರ ಮಾಡುತ್ತಿದ್ದೇವೆ.

Sri M. C. BASAPPA.—May I know what kind of examination is going on?

ಶ್ರೀ ಎಸ್. ಆರ್. ಕಂಠಿ.—ಮಂಜೂರಾತಿ ಎಷ್ಟು ಕೊಡಬೇಕೆಂಬುದನ್ನು ಪರೀಕ್ಷೆ ಮಾಡುತ್ತಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಈ 8 ಜನ ಉಪಾಧ್ಯಾಯರುಗಳನ್ನೂ ಸಹ ಮಂಜೂರು ಮಾಡಲಿಲ್ಲ, ಏಕೆ?

ಶ್ರೀ ಎಸ್. ಆರ್. ಕಂಠಿ.—ಈಗ ಒಟ್ಟು 8 ಜನ ಉಪಾಧ್ಯಾಯರುಗಳು ಬೇಕಾಗಿದೆ. ಆ ಬಗ್ಗೆ ಯಾವಾಗ ಮಂಜೂರಾತಿ ಆಗುತ್ತದೋ ಆಗ ನೇಮಕ ಮಾಡುತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ತಾಲ್ಲೂಕಿನಲ್ಲಿ ಈಗ ಬೇಕಾಗಿರುವ ಉಪಾಧ್ಯಾಯರುಗಳು 8 ಜನ; ಆ ಬಗ್ಗೆ ಪ್ರೊಪೋಸಲ್ಸ್ ಬಂದಿದೆ ಎಂದು ಹೇಳುತ್ತೀರಿ. ಅಂದಮೇಲೆ ಪುನಃ ಪರೀಕ್ಷೆ ಮಾಡತಕ್ಕ ಅವಶ್ಯಕತೆ ಏನಿದೆ?

ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆ ಇರುವುದು ಚಾಮರಾಜನಗರದ ತಾಲ್ಲೂಕಿಗೆ ಸೇರಿದ್ದು ಆಗಿದೆ. ಆ ಪ್ರಕಾರ ಒಂದೊಂದು ತಾಲ್ಲೂಕಿನದೂ ಇಲ್ಲಿ ಬರುವುದಿಲ್ಲ. ಡಿ.ಪಿ.ಐ. ಅವರಿಂದ ಡಿವಿಜನ್‌ವಾರು ಪಟ್ಟಿ ಬರುತ್ತದೆ. ಎಲ್ಲವನ್ನೂ ಎಗ್ಸಾಮಿನ್ ಮಾಡಬೇಕೆಂದು ಹೇಳಿರುವುದರಿಂದ ಆ 8 ಜನಗಳ ಬಗ್ಗೆ ಈಗ ಎಗ್ಸಾಮಿನ್ ಮಾಡಬೇಕಾಗಿದೆ.

Inconvenience caused to the people due to taking over of Road Transport in Hassan District by the Road Transport Corporation.

**Q*.—440. Sri B. HUTCHE GOWDA (Turuvekere).—

Will the Government be pleased to state:—

(*a*) whether it is not a fact that the Road Transport in Hassan District was taken over by the Road Transport Corporation in November 1961;

(*b*) whether it is not a fact that the Corporation have reduced the number of bus services from the date of their taking over in many routes, for example in Tiptur—Channarayapatna road;

(*c*) whether they are aware that this has caused inconvenience to the travelling public?

A.—Sri D. DEVARAJ URS (Minister for Labour, Housing and Transport).—

(*a*) The stage carriage service was taken over by the Mysore State Road Transport Corporation on 26th October 1961.

(*b*) It was necessary to rationalise the services which resulted in slight changes in the number of trips operated between common portion of the routes but the total mileage has not been affected.

(*c*) No inconvenience is caused because the seating capacity of the Mysore State Road Transport Corporation Buses is nearly double that of the buses operated prior to nationalisation. If, in spite of this arrangement, it is found necessary to increase the number of trips to meet any increased demand, the Government will take suitable action.

ಶ್ರೀ ಬಿ. ಹುಚ್ಚೇಗೌಡ.—ತಾವು ರಸ್ತೆ ಸಾರಿಗೆಯನ್ನು ಈ ಜಿಲ್ಲೆಯಲ್ಲಿ ತೆಗೆದುಕೊಂಡಾಗ್ಗೆ ಎಷ್ಟು ಬಸ್ಸುಗಳು ಓಡಾಡುತ್ತಿದ್ದವು?

ಶ್ರೀ ಡಿ. ದೇವರಾಜ್ ಅರಸ್.—ನಾವು ತೆಗೆದುಕೊಂಡಾಗ 126 ಬಸ್ಸುಗಳು ಓಡಾಡುತ್ತಿದ್ದವು.

ಶ್ರೀ ಬಿ. ಹುಚ್ಚೇಗೌಡ.—ರಾಷ್ಟ್ರೀಕರಣದ ಮುಂಚೆ ಎಷ್ಟು ಬಸ್ಸುಗಳು ಓಡಾಡುತ್ತಿದ್ದವು?